



ಕಾಡು ಕುದುರೆ ಸಫಾರಿ

ಕಾಡು ಕುದುರೆಗಳು ಎದುರಿಸಬೇಕಾಗುತ್ತಿದೆ. ಇದಕ್ಕಿಂತಲೂ ದೊಡ್ಡ ಕಂಟಕ ತೈಲ ದೊರೆಗಳದ್ದು. ಅದರಲ್ಲೂ ಅಮೆರಿಕದ ಪಶ್ಚಿಮ ಭಾಗ ತೈಲ ಸಂಪನ್ಮೂಲಕ್ಕೆ ಹೆಸರುವಾಸಿ. ಪ್ರಶ್ನೆ ಏಳುವುದು ತೈಲ ಮುಖ್ಯವೋ, ಕಾಡು ಕುದುರೆ ಮುಖ್ಯವೋ ಎಂದಾಗ ತೀರ್ಪು ಯಾವ ಕಡೆ ಹೋಗುತ್ತದೆಂದು ಯಾರಾದರೂ ಸುಲಭವಾಗಿ ಊಹಿಸಬಹುದು. ಒಮ್ಮೆ ತೈಲದ ರಿಗ್‌ಗಳು ಬಂದು ನೆಲ ಕೊರೆಯಲು ಪ್ರಾರಂಭಿಸಿದರೆ ಮುಗಿಯಿತು, ಕಾಡು ಕುದುರೆಗಳು ಓಟ ಕೀಳುತ್ತವೆ ಮತ್ತೆ ಆ ಜಾಗದತ್ತ ತಪ್ಪಿಯೂ ಬರುವುದಿಲ್ಲ. ಭೂ ನಿರ್ವಹಣಾ ಬ್ಯೂರೋ ಕಾಡು ಕುದುರೆಗಳನ್ನು ಬಂಧಿಸಲು ಅಲ್ಲಲ್ಲೇ ದೊಡ್ಡಿಗಳನ್ನು ನಿರ್ಮಿಸಿದೆ. ನಮ್ಮಲ್ಲಿ ಹಿಂದೆ ಖೆಡ್ಡಾದಲ್ಲಿ ಆನೆ ಕೆಡವಿದ ಹಾಗೆ. ಲಂಗುಲಗಾಮಿಲ್ಲದ ಕಾಡು ಕುದುರೆಗಳು ಗುಂಪಿನಲ್ಲಿ ಓಡುವುದರಿಂದ ಎದ್ದು ಬಿದ್ದು ಗಾಯಮಾಡಿಕೊಳ್ಳುತ್ತವೆ. ಕಿರಿ ಪ್ರಾಯದವು ಸತ್ತ ಪ್ರಕರಣಗಳು ಬೇಕಾದಷ್ಟಿವೆ. ಕೆಲವೊಮ್ಮೆ ಹೆಲಿಕ್ಯಾಪ್ಟರ್ ಬಳಸಿ, ಕಾಡು ಕುದುರೆಗಳ ಬೆನ್ನಟ್ಟಿ ದೊಡ್ಡಿಗೆ ನೂಕುವುದೂ ಉಂಟು. ಆದರೆ ಅವುಗಳ ಸಂತಾನಾಭಿವೃದ್ಧಿಗೆ ಇದೇನೂ ಅಡ್ಡಬಂದಿಲ್ಲ. ಹೆಚ್ಚು ಕಡಿಮೆ ಮೂವತ್ತು ವರ್ಷಗಳ ಜೀವಿತಕಾಲ ಅವುಗಳದ್ದು. ಆದ್ದರಿಂದ ಬೇಗ ಖಾಲಿಯಾಗುವ ಸಂಭವವೂ ಇಲ್ಲ. ಹಾಗಾದರೆ ದೊಡ್ಡಿಗಳು ಹಿಡಿಸದಿದ್ದರೆ ಏನು ಮಾಡಬೇಕು? ಈ ಕುರಿತು ಯೋಚಿಸಿದಾಗ ಭೂ ನಿರ್ವಹಣಾ ಬ್ಯೂರೋಗೆ ಹೊಳೆದದ್ದು ಇನ್ನೊಂದು ಉಪಾಯ. ಕಸಾಯಿಖಾನೆಗೆ ಅಟ್ಟುವುದು. ಮೆಕ್ಸಿಕೋ ಮತ್ತು ಕೆನಡಾದಲ್ಲಿ ಕಾಡು ಕುದುರೆಗಳ ಕಸಾಯಿಖಾನೆಗಳು ಭರ್ಜರಿ ವ್ಯಾಪಾರ ಮಾಡುತ್ತಿವೆ. ಅಮೆರಿಕದ ವೈಲ್ಡ್ ಹೌಸ್, ಪೀಪಲ್ ಫೆಡರೇಷನ್ ಮುಂತಾದ ಸಂಸ್ಥೆಗಳು ಕಸಾಯಿಖಾನೆಗೆ ಅಟ್ಟುವುದನ್ನು ಬಲವಾಗಿ ವಿರೋಧಿಸಿಕೊಂಡೇ ಬಂದಿವೆ. ಅವು ತಮ್ಮ ನೈಜ ಆವಾಸದಲ್ಲೇ ಇರಲಿ, ಹೆಚ್ಚು ಹೆಚ್ಚು ವನ್ಯಧಾಮಗಳನ್ನು ಸೃಷ್ಟಿಸಿ ಎನ್ನುವುದು ಅವುಗಳ ಸಲಹೆ. ಜನರ ಕಣ್ಣನ್ನೂ ತಪ್ಪಿಸಿ ಅಮೆರಿಕ, ಸದ್ದಿಲ್ಲದೆ ಕಾಡು ಕುದುರೆಗಳನ್ನು ಗಯಾನಾ, ರಷ್ಯಾ ದೇಶಗಳಿಗೆ ಹಡಗಿನಲ್ಲಿ ರವಾನೆಮಾಡಿ ಕೈತೊಳೆದುಕೊಳ್ಳುವುದುಂಟು. ಒಮ್ಮೆ ಅಮೆರಿಕ ತೊರೆದರೆ ಕಾನೂನು ಕಟ್ಟಳೆಗಳು ಬಾಧಿಸುವುದಿಲ್ಲ.

ಅಮೆರಿಕದ ಕಾಡು ಕುದುರೆ ಪ್ರೇಮಿಗಳು ಇನ್ನೂ ಒಂದು ದುರಂತವನ್ನು ಪ್ರತಿಪಾದಿಸುತ್ತಿದ್ದಾರೆ. ಕಾಡು ಕುದುರೆಗಳಿಗೆ ರೋಗ ತಗಲಿದಾಗ, ಅವನ್ನು ಸೆರೆಹಿಡಿದು ಚಿಕಿತ್ಸೆ ಕೊಡುವುದೂ ಉಂಟು. ಅಂಥ ಕಾಡು ಕುದುರೆಗಳನ್ನು ಮಾಂಸಕ್ಕಾಗಿ ಬಳಸುವುದು ಅಪಾಯಕಾರಿ ಎಂಬ ಅಂಶವನ್ನೂ ಜಾಹೀರು ಮಾಡುತ್ತಿದ್ದಾರೆ. ಸರ್ಕಾರ 1971ರಲ್ಲಿ ಅಮೆರಿಕದಲ್ಲಿ ಸ್ವಚ್ಛಂದವಾಗಿ ಅಲೆಯುವ ಕಾಡು ಕುದುರೆಗಳ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದರೂ, ಅವುಗಳ ರಕ್ಷಣೆಯ ಪರವಾಗಿ ಸರ್ಕಾರವೇ ಇಲ್ಲ. ಬೇಲಿಯೇ ಎದ್ದು ಹೊಲ ಮೇಯ್ದಂತೆ. ಕಾಡು ಕುದುರೆಗಳಿಗೆ 'ನಂ. 1 ಎನಿಮಿ' ಅಲ್ಲಿನ ಸರ್ಕಾರವೇ.



ಕಾಡು ಕುದುರೆಯ ದತ್ತು ಸ್ವೀಕಾರದ ಖುಷಿ

## ಹೋರಾಟದ ಬದುಕು

ಹೀಗೆಂದು ಅಮೆರಿಕದಲ್ಲಿ ಕಾಡು ಕುದುರೆಗಳಿಗೆ ಕಂಡಲ್ಲಿ ಗುಂಡು ಎಂಬ ಹಂತವೇನೂ ಸೃಷ್ಟಿಯಾಗಿಲ್ಲ. ಕೆಲವು ವನ್ಯಜೀವಿ ಸಂರಕ್ಷಣಾ ತಾಣಗಳಲ್ಲಿ ಅವು ಸುರಕ್ಷಿತವಾಗಿವೆ. ನಿವೇಡದ ವರ್ಜೀನಿಯ ರೇಂಜ್, ಅಮೆರಿಕದ ಅರ್ಧ ಪಾಲು ಕಾಡು ಕುದುರೆಗಳ ಸಂರಕ್ಷಣಾ ಪ್ರದೇಶ. ಇವನ್ನು ಸಾಧಾರಣವಾಗಿ ಇಲ್ಲಿ 'ಅನ್ನೀಸ್ ಹಾರ್ಸ್' ಎನ್ನುವುದುಂಟು. ಆಕೆ ಕಾಡು ಕುದುರೆಗಳನ್ನು ಸಾಗಿಸಲು ಯಾವುಯಾವುದೋ ವಾಹನಗಳನ್ನು ಬಳಸಬೇಡಿ, ಅವುಗಳ ರಕ್ಷಣೆ ನಮ್ಮದು ಎಂದು ದೊಡ್ಡ ಹುಯಿಲನ್ನೇ ಮಾಡಿದಾಗ, ಅದು ಸರ್ಕಾರಕ್ಕೂ ತಟ್ಟಿತು, ಆ ಪ್ರದೇಶದ ಕಾಡು ಕುದುರೆಗಳನ್ನು ಅವಳ ಹೆಸರಿನಿಂದಲೇ ಕರೆಯಲಾಯಿತು. 1959ರಲ್ಲಿ ಕಾಡು ಕುದುರೆಗಳ ಸಂರಕ್ಷಣೆಗೆ ತಿದ್ದುಪಡಿ ತಂದಾಗ, ಅದು 'ಅನ್ನೀ ಆಕ್ಟ್' ಎಂದೇ ಕರೆಸಿಕೊಂಡಿತು. ವರ್ಜೀನಿಯ ರೇಂಜ್‌ನಲ್ಲಿ ಕಾಡು ಕುದುರೆಗಳನ್ನು ಕಣ್ಣಾರೆ ಕಂಡು ಆನಂದಿಸಬಹುದು. ಪ್ರಾಣಿಗಳ ತೀರ ಹತ್ತಿರಕ್ಕೆ ಹೋಗುವಂತಿಲ್ಲ. ಅವಕ್ಕೆ ಕೈ ತಿಂಡಿ ಕೊಟ್ಟು ಅವುಗಳ ಆಹಾರ ಸ್ವಭಾವವನ್ನು ಬದಲಿಸಬೇಡಿ ಎಂದು ಸೂಚನೆಗಳಿದ್ದರೂ ಅದನ್ನು ಮೀರುವುದೇ ಹಲವರಿಗೆ ಖುಷಿ. ಅಲ್ಲದೆ ಕಾಡು ಪ್ರಾಣಿಗಳನ್ನು ಮುಟ್ಟಲು ಹೋದರೆ ಬೆದರಿ ಕಾಲೆತ್ತಿ ಲಾತ ಕೊಡುತ್ತವೆ; ಎಂಥ ಗಟ್ಟಿ ಮೂಳೆಯೂ ಪುಡಿಯಾಗುವಷ್ಟು. ಒಮ್ಮೊಮ್ಮೆ